**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸೆಷನ್ಸ್‌ಕೇಸ್ ನಂ. 9/2020**

**ಚಾ.ಸಾ. : 01**

**ಫ್ರಾ.ಸಾ. : 01**

| | |
|---|---|
| ಸಾಕ್ಷಿಯ ಹೆಸರು | : ಸುಶೀಲಾ |
| ಗಂಡನ ಹೆಸರು | : ವಾಸು ದೇವಾಡಿಗ |
| ವಯಸ್ಸು | : 45 ವರ್ಷ |
| ಉದ್ಯೋಗ | : ಕೂಲಿ ಕೆಲಸ |
| ವಾಸ | : ಮಾವಿನಕಟ್ಟಾ, ಬೆಂಗ್ರೆ |

**ದಿನಾಂಕಃ 09-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದ**

1. ಚಾಸಾ 9 ನನ್ನ ಗಂಡ. ಚಾಸಾ 10 ನನ್ನ ಮಗ. ಚಾಸಾ 11 ನನ್ನ ಗಂಡನ ತಂದೆ. ಚಾಸಾ 7 ನನ್ನ ತಮ್ಮ. ಚಾಸಾ 8 ನನ್ನ ಚಿಕ್ಕಪ್ಪನ ಮಗ. ಮೃತೆ ಭಾರತಿ ನನ್ನ ಮಗಳು. ನ್ಯಾಯಾಲಯದ ಮುಂದೆ ಇರುವ ಆರೋಪಿ ಮೃತೆಯ ಗಂಡ. ಅಂದಾಜು 10 ವರ್ಷಗಳ ಹಿಂದೆ ಮೃತೆಯ ಮದುವೆ ಭಟ್ಕಳದ ವಿವಾಹ ನೊಂದಣಿ ಕಛೇರಿಯಲ್ಲಿ ಆರೋಪಿಯ ಜೊತೆ ಆಗಿದ್ದು ನಾವೆಲ್ಲರೂ ಮದುವೆಗೆ ಹೋಗಿದ್ದೆವು. ನಮ್ಮದು ಮತ್ತು ಆರೋಪಿಯದ್ದು ಬೇರೆ ಬೇರೆ ಜಾತಿಯಾಗಿತ್ತು. ಮದುವೆಯ ನಂತರ ಮೃತೆ ಆರೋಪಿತನೊಂದಿಗೆ ಹೊನ್ನಾವರ ಹಾಗೂ ಸಾಗರದಲ್ಲಿ ಉಳಿದುಕೊಂಡಿದ್ದಳು. ಆರೋಪಿ ಕೂಲಿ ಕೆಲಸ ಮಾಡುತ್ತಿದ್ದ. ಆರೋಪಿ ಹಾಗೂ ಮೃತೆಯು ಚೆನ್ನಾಗಿ ಸಂಸಾರ ಮಾಡಿಕೊಂಡಿದ್ದರು. ಆರೋಪಿತನು ನನ್ನ ಮಗಳ ಮೇಲೆ ಸಂಶಯ ಪಟ್ಟು ಆಕೆಯ ಮೇಲೆ ಆಪಾದನೆ ಮಾಡಿದ್ದು ಇರುವುದಿಲ್ಲ. ಈ ಬಗ್ಗೆ ನನ್ನ ಬಳಿ ಮೃತೆ ಏನನ್ನೂ ಹೇಳಿರುವುದಿಲ್ಲ. ನನ್ನ ಮಗಳು ಯಾವ ಕಾರಣಕ್ಕಾಗಿ ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ ಎಂದು ನನಗೆ ಗೊತ್ತಿಲ್ಲ. ಆಕೆ ಫೋನ್ ತೆಗೆದುಕೊಂಡು ಮಾತನಾಡಲು ಮನೆಯಿಂದ ಹೋಗಿದ್ದಳು. ನಂತರ ನಮಗೆ ಮೃತೆಗೆ ರೈಲು ತಾಗಿದೆ ಎಂದು ಸುದ್ದಿ ಬಂದು ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿರುವ ರೈಲ್ವೆ ಹಳಿಯ ಬಳಿ ಹೋದಾಗ ಆಕೆಗೆ ರೈಲು ತಾಗಿ ಗಾಯಗಳಾಗಿತ್ತು.

ಕಾರಣ ನಾನು ನನ್ನ ಗಂಡ ಹಾಗೂ ಊರಿನವರು ಸೇರಿ ಮೃತೆಯನ್ನು ಮುರುಡೇಶ್ವರದ ಆರ್ ಎನ್ ಎಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗೆ ದಾಖಲಿಸಿದ್ದು ಅಲ್ಲಿನ ವೈದ್ಯರು ಹೆಚ್ಚಿನ ಚಿಕಿತ್ಸೆಗೆ ಭಟ್ಕಳದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಲು ತಿಳಿಸಿದ್ದರಿಂದ ಅಂಬುಲೆನ್ಸನಲ್ಲಿ ಆಕೆಯನ್ನು ಕರೆದುಕೊಂಡು ಹೋಗುತ್ತಿದ್ದಾಗ ಬೆಂಗ್ರೆ ಹತ್ತಿರ ಆಕೆ ಮೃತಪಟ್ಟಿದ್ದರಿಂದ ಆಕೆಯ ಶವವನ್ನು ನಾವು ಭಟ್ಕಳ ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತೇವೆ.

2. ನಾನು ಭಟ್ಕಳದ ಸರ್ಕಾರಿ ಆಸ್ಪತ್ರೆಯಲ್ಲಿದ್ದಾಗ ಪೋಲಿಸರು ಅಲ್ಲಿಗೆ ಬಂದು ಒಂದು ಬರೆದಿಟ್ಟ ದಾಖಲೆಯ ಮೇಲೆ ನನ್ನ ಹೆಬ್ಬೆಟ್ಟಿನ ಸಹಿಯನ್ನು ಪಡೆದಿರುತ್ತಾರೆ. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುವುದಿಲ್ಲ. ಈಗ ನನಗೆ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಗೆ ತೋರಿಸಲಾದ ದಾಖಲೆ ದಿಃ 16.12.2016 ರಂದು ದೂರು ಆಗಿದ್ದು ಸಾಕ್ಷಿಯು ಅದರಲ್ಲಿರುವ ತನ್ನ ಎಡಗೈ ಹೆಬ್ಬೆಟ್ಟು ಗುರುತನ್ನು ಗುರುತಿಸಿದ್ದರಿಂದ ಸದ್ರಿ ದೂರನ್ನು ನಿಪಿ. 1 ಎಂದು ಗುರುತಿಸಲಾಯಿತು. ನಿಪಿ 1 ರ ವಿವರಗಳು ನನಗೆ ಗೊತ್ತಿಲ್ಲ. ನಾನು ತನಿಖಾಧಿಕಾರಿಯ ಮುಂದೆ ಯಾವದೇ ಮರು ಹೇಳಿಕೆಯನ್ನು ನೀಡಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಮೊಬೈಲು ಹಾಗೂ ಬ್ಯಾಟರಿಯನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ಸಾಕ್ಷಿ ಗುರುತಿಸಲು ನಿರಾಕರಿಸಿದ ಕಪ್ಪು ಬಣ್ಣದ ಸಿಮ್ ಕಾರ್ಡ ಅಳವಡಿಸಿರುವ ನೋಕಿಯಾ ಮೊಬೈಲ್ ಹಾಗೂ ನೋಕಿಯಾ ಕಂಪನಿಯ ಕಪ್ಪು ಬಣ್ಣದ ಬ್ಯಾಟರಿಯನ್ನು ಕ್ರಮವಾಗಿ ಮು ಮಾ 1 ಮತ್ತು 2 ಎಂದು ಗುರುತಿಸಲಾಯಿತು (ಮು ಮಾ 1 ಮತ್ತು 2 ಸೀಲ್ ಆದ ಬಿಳಿ ಬಟ್ಟೆಯ ಪ್ಯಾಕೇಟಿನಲ್ಲಿದ್ದು ಸಾಕ್ಷಿಗೆ ತೋರಿಸುವ ಉದ್ದೇಶದಿಂದ ಪ್ಯಾಕೇಟನ್ನು ಒಡೆದು ಸಾಕ್ಷಿಗೆ ತೋರಿಸಿ ಮುದ್ದೆಮಾಲಾಗಿ ಗುರುತಿಸಲಾಯಿತು.) ಮೃತೆಯು ಯಾವ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಸರಕಾರಿ ಅಭಿಯೋಜಕರು ಅನುಮತಿಯನ್ನು ಕೇಳಿದ್ದು ಈ ಮೇಲಿನ ಪ್ರತಿಕೂಲ ಸಾಕ್ಷ್ಯವನ್ನು ಪರಿಗಣಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರಿಂದ**

3. ಮದುವೆಯಾದ ನಂತರ ಕೆಲ ದಿನಗಳವರೆಗೆ ಆರೋಪಿ ಹಾಗೂ ಮೃತೆ ಚೆನ್ನಾಗಿ ಸಂಸಾರ ಮಾಡಿಕೊಂಡಿದ್ದರು ಮತ್ತು ನಂತರದಲ್ಲಿ ಆರೋಪಿತನು ಮೃತೆಯ ಬಗ್ಗೆ ಸಂಶಯ ಪಡುತ್ತಾ ಇದ್ದವನು ಅವಳಿಗೆ ಇಲ್ಲಸಲ್ಲದ ಆಪಾದನೆ ಮಾಡುತ್ತಾ ಮಾನಸಿಕವಾಗಿ ತೊಂದರೆ ಕೊಡುತ್ತಾ ಇರುತ್ತಿದ್ದನು ಮತ್ತು ಈ ಬಗ್ಗೆ ಮೃತೆಯು ನನ್ನಲ್ಲಿ ಹೇಳಿಕೊಂಡಿದ್ದಳು ಎಂದರೆ ಸರಿಯಲ್ಲ. ಹೊಸತಾಗಿ ಮದುವೆಯಾಗಿದ್ದರಿಂದ ಮುಂದೆ ಸರಿ ಹೋಗಬಹುದು ಎಂದು ತಿಳಿದು ನಾನು ಅವಳಿಗೆ ತಿಳುವಳಿಕೆ ಹೇಳಿದ್ದೆ ಎಂದರೆ ಸರಿಯಲ್ಲ. ದಿಃ 16.12.2016 ರ 20 ದಿನಗಳ ಹಿಂದೆ ಮೃತೆಯು ವಾಪಾಸ ನಮ್ಮ ಮನೆಗೆ ಬಂದಿದ್ದು ನಮ್ಮ ಮನೆಯಲ್ಲಿಯೇ ವಾಸವಾಗಿದ್ದಳು ಹಾಗೂ ಆರೋಪಿ ಆಗಾಗ ನಮ್ಮ ಮನೆಗೆ ಹೋಗಿ ಬಂದು ಮಾಡುತ್ತಿದ್ದ ಎಂದರೆ ಸರಿಯಲ್ಲ. ಆರೋಪಿತನು ದಿಃ 16.12.2016 ರ 7 ದಿನಗಳ ಹಿಂದೆ ನಮ್ಮ ಮನೆಗೆ ಬಂದಿದ್ದವನು ಮೃತೆಯ ಹತ್ತಿರ ನೀನು ಎಲ್ಲೆಲ್ಲೋ ಯಾರ್ಯಾರ ಜೊತೆಗೆ ತಿರುಗಾಡಲು ಹೋಗುತ್ತೀಯಾ ಅಂತಾ ನನ್ನ ಮಗಳ ಶೀಲದ ಬಗ್ಗೆ ಸಂಶಯ ಮಾಡುತ್ತಾ ನೀನು ಶೀಲಗೆಟ್ಟು ಬದುಕುವುದಕ್ಕಿಂತ ಎಲ್ಲಾದರೂ ಹೋಗಿ ಸಾಯಿ ಅಂತಾ ಹೇಳಿದ್ದನು ಮತ್ತು ಆಕೆಯನ್ನು ಸೂಳೆ , ರಂಡೆ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಅವಳ ಕೈ ಹಿಡಿದು ಎಳೆದಾಡಿದ್ದನು ಎಂದರೆ ಸರಿಯಲ್ಲ. ಆಗ ನಾನು ಆರೋಪಿಗೆ ಯಾಕೆ ಮೃತೆಯ ಮೇಲೆ ಸಂಶಯ ಪಡುತ್ತೀಯಾ ಅಂತಾ ಕೇಳಿದಾಗ ಅವನು ನಮ್ಮ ಮನೆಯಿಂದ ಹೋಗಿದ್ದನು ಎಂದರೆ ಸರಿಯಲ್ಲ.

4. ದಿಃ 15.12.2016 ರಂದು ಸಂಜೆ 5.30 ಗಂಟೆ ಸುಮಾರಿಗೆ ಆರೋಪಿತನು ನಮ್ಮ ಮನೆಯ ಮೊಬೈಲ್ ನಂಬರ್ 7022820412 ನೇದಕ್ಕೆ ಕರೆ ಮಾಡಿ ನನ್ನ ಮಗಳ ಹತ್ತಿರ ನೀನು ಎಲ್ಲೆಲ್ಲಿ ತಿರುಗಾಡುತ್ತೀಯಾ ಅಂತಾ ಬೈದಿದ್ದು ಆಗ ಮೃತೆ ಮೊಬೈಲನ್ನು ನನ್ನ ಹತ್ತಿರ ಕೊಟ್ಟಾಗ ನಾನು ಆರೋಪಿತನಿಗೆ ಆಕೆ ಎಲ್ಲಿಯೂ ಹೋಗಿಲ್ಲ, ಮನೆಯಲ್ಲಿಯೇ ಇದ್ದಾಳೆ ಎಂದು ಹೇಳಿದೆನು ಎಂದರೆ ಸರಿಯಲ್ಲ. ನಂತರ ಮೃತೆ ಮತ್ತು ಆರೋಪಿತನು ಫೋನಿನಲ್ಲಿ ಜೋರು ಜೋರಾಗಿ ಮಾತನಾಡಿಕೊಂಡಿದ್ದರು ಮತ್ತು ನಂತರ ಮೃತೆ ಅಳುತ್ತಾ ಬೇಜಾರಿನಲ್ಲಿದ್ದಳು ಎಂದರೆ ಸರಿಯಲ್ಲ. ಸಂಜೆ 6.45 ಗಂಟೆಗೆ ಮೃತೆಯು ನಮ್ಮ ಮನೆಯ ಹತ್ತಿರದಲ್ಲಿರುವ ಅಜ್ಜನ ಮನೆಗೆ ತಾನು ಹೋಗಿ ಬರುವುದಾಗಿ ನನ್ನ ಬಳಿ ಹೇಳಿ ಹೋಗಿದ್ದಳು

ಎಂದರೆ ಸರಿಯಲ್ಲ. ಸ್ವಲ್ಪ ಸಮಯದ ನಂತರ ನನ್ನ ತಂದೆಯಾದ ಚಾಸಾ 11 ರವರು ನಮ್ಮ ಮನೆಯ ಹತ್ತಿರ ಬಂದಿದ್ದು ನಾನು ಅವರಿಗೆ ಮೃತೆಯು ನಿಮ್ಮ ಮನೆಯ ಹತ್ತಿರ ಹೋಗಿದ್ದಾಳೆ ಎಂದು ಹೇಳಿದಾಗ ಅವರು ನಾನು ಮನೆಯ ಹತ್ತಿರ ಹೋಗಿ ನೋಡುತ್ತೇನೆ ಎಂದು ಹೇಳಿ ಹೋಗಿದ್ದರು ಎಂದರೆ ಸರಿಯಲ್ಲ. ನಂತರ ನನ್ನ ತಂದೆ ಚಾಸಾ 11 ರವರ ಮೊಬೈಲ್ ಸಂಖ್ಯೆ 9945351875 ನೇದಕ್ಕೆ ಮೊಬೈಲ್ ಸಿಮ್ ಸಂಖ್ಯೆ 8296562427 ರಿಂದ ಸಂಜೆ 7.30 ಕ್ಕೆ ಕರೆ ಬಂದಿದ್ದು ಮೃತೆ ಮಾತನಾಡಿ ತಾನು ರೈಲು ಬಡಿದು ಬಿದ್ದ ಬಗ್ಗೆ ತಿಳಿಸಿದ್ದಳು ಎಂದರೆ ಸರಿಯಲ್ಲ. ಕೂಡಲೇ ನಾನು, ನನ್ನ ಗಂಡ ಚಾಸಾ 9 ಹಾಗೂ ನನ್ನ ಚಿಕ್ಕಮ್ಮ ಚಾಸಾ 12 ಮತ್ತು ನನ್ನ ತಂದೆ ಚಾಸಾ 11 ಸೇರಿ ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿರುವ ರೈಲ್ವೆ ಹಳಿಯ ಹತ್ತಿರ ಹೋದಾಗ ನನ್ನ ಮಗಳಿಗೆ ಅಲ್ಲಿ ಸೇರಿದ್ದ ಜನರು ನೀರು ನೀಡಿ ಉಪಚರಿಸುತ್ತಿದ್ದರು ಮತ್ತು ನಾವು ಹೋಗಿ ನೋಡಿದಾಗ ಅವಳ ಹಣೆಗೆ, ಬಲಕೈಗೆ ಗಾಯವಾಗಿದ್ದು ಕಂಡುಬಂದಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನಮಗೆ ಬೇರೆಯವರು ದೂರವಾಣಿ ಕರೆ ಮಾಡಿ ಮೃತೆಗೆ ರೈಲು ತಾಗಿ ಗಾಯಗಳಾಗಿದ್ದ ಬಗ್ಗೆ ತಿಳಿಸಿದ್ದರು ಎನ್ನುತ್ತಾರೆ.

5. ನಂತರ ನಾನು, ನನ್ನ ಗಂಡ ಚಾಸಾ 9, ನನ್ನ ಚಿಕ್ಕಮ್ಮ ಚಾಸಾ 12 ಹಾಗೂ ನಮ್ಮ ಊರಿನವರಾದ ಚಂದ್ರು ಎನ್ನುವವರು ಸೇರಿ ನನ್ನ ಮಗಳಿಗೆ ಒಂದು ರಿಕ್ಷಾದಲ್ಲಿ ಹಾಕಿಕೊಂಡು ಮುರುಡೇಶ್ವರದ ಆರ್ ಎನ್ ಎಸ್ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿ ಅಲ್ಲಿಯ ವೈದ್ಯರು ಮೃತೆಗೆ ಉಪಚರಿಸಿ ನಂತರ ಹೆಚ್ಚಿನ ಚಿಕಿತ್ಸೆಗೆ ಭಟ್ಕಳದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಲು ತಿಳಿಸಿದ್ದರಿಂದ ತುರ್ತು ಚಿಕಿತ್ಸಾ ವಾಹನದಲ್ಲಿ ಮೃತೆಯನ್ನು ಭಟ್ಕಳಕ್ಕೆ ಕರೆದುಕೊಂಡು ಹೋಗುತ್ತಿದ್ದಾಗ ಮಾರ್ಗ ಮಧ್ಯೆ ಬೆಂಗ್ರೆ ತಲುಪುತ್ತಿದ್ದಂತೆ ಮೃತೆ ರಾತ್ರಿ 8.45 ಕ್ಕೆ ಮೃತಪಟ್ಟಿದ್ದು ಅವಳ ಶವವನ್ನು ಭಟ್ಕಳ ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ಇಟ್ಟಿದ್ದು ಇರುತ್ತದೆ ಎಂದರೆ ಸರಿ.

6. ಮೃತೆಯ ಮೇಲೆ ಆರೋಪಿತನು ಅವಳ ಶೀಲದ ಬಗ್ಗೆ ವಿನಾಕಾರಣ ಸಂಶಯ ಪಡುತ್ತಾ ಅವಾಚ್ಯ ಶಬ್ದಗಳಿಂದ ಬೈಯುತ್ತಾ ಮಾನಸಿಕ ಕಿರುಕುಳ ನೀಡುತ್ತಾ ಇದ್ದವನು ದಿಃ 15.12.2016 ರಂದು ಸಂಜೆ 5.30 ಗಂಟೆಯ ಸುಮಾರಿಗೆ ಫೋನ್ ಮಾಡಿ ಮತ್ತೆ ಎಲ್ಲೆಲ್ಲೋ ಯಾರ್ಯಾರ ಜೊತೆಗೆ ತಿರುಗಾಡಲು ಹೋಗುತ್ತೀಯಾ ಅಂತಾ ಹೇಳಿ ಅವಳ ಶೀಲದ ಬಗ್ಗೆ

ಸಂಶಯಪಡುತ್ತಾ ಇಲ್ಲಸಲ್ಲದ ಮಾತುಗಳಿಂದ ಮಾತನಾಡಿದ್ದರಿಂದ ಮೃತೆಯು ಮಾನಸಿಕವಾಗಿ ನೊಂದು ಯಾವದೋ ರೈಲಿಗೆ ಮೈಯೊಡ್ಡಿ ಆತ್ಮಹತ್ಯೆ ಮಾಡಿಕೊಂಡಿದ್ದು ಇರುತ್ತದೆ ಎಂದರೆ ಸರಿಯಲ್ಲ. ಮೃತೆಯು ಆರೋಪಿತನು ಆಕೆಯ ಶೀಲದ ಬಗ್ಗೆ ಶಂಕಿಸಿ ನೀನು ಶೀಲಗೆಟ್ಟು ಬದುಕುವುದಕ್ಕಿಂತ ಎಲ್ಲಾದರೂ ಹೋಗಿ ಸಾಯಿ ಎಂದು ಹೇಳಿದ್ದರಿಂದಲೇ ಅವಳು ಮಾನಸಿಕವಾಗಿ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ನಾನು ನಿಪಿ. 1 ರಂತೆ ದೂರನ್ನು ನೀಡಿದ್ದೆ ಎಂದರೆ ಸರಿಯಲ್ಲ. ನಾನು ನನ್ನ ತಮ್ಮ ಚಾಸಾ 7 ಗೋವಾದಿಂದ ಬಂದ ನಂತರ ಆತನಿಗೆ ವಿಷಯ ತಿಳಿಸಿ ಠಾಣೆಗೆ ಬಂದು ದೂರು ನೀಡಲು ನನಗೆ ವಿಳಂಬವಾಗಿತ್ತು ಎಂದರೆ ಸರಿಯಲ್ಲ.

7. ದಿಃ 15.12.2016 ರಂದು ಸಂಜೆ 5.30 ಗಂಟೆಯ ಸುಮಾರಿಗೆ ಆರೋಪಿತನು ನಮ್ಮ ಮನೆಯ ಮೊಬೈಲ್ ನಂಬರ್ 7072820412 ಕ್ಕೆ ಪೋನ್ ಮಾಡಿ ನನ್ನ ಮಗಳ ಜೊತೆ ಮಾತನಾಡಿದ ಬಗ್ಗೆ ನಾನು ನಿಪಿ. 1 ರಲ್ಲಿ ನಮೂದಿಸಿದ್ದೆ , ಆದರೆ ಈ ದೂರವಾಣಿಯ ಹೊರತಾಗಿ ಮೃತೆಯ ಬಳಿ ಇನ್ನೂ 2-3 ಮೊಬೈಲ್ ಇದ್ದು ಅದರ ಮೊಬೈಲ್ ನನಗೆ ನೆನಪಿರುವುದಿಲ್ಲ, ಆರೋಪಿ ಮಾತನಾಡಿರುವುದು ಮೃತೆಯು ಮನೆಯಲ್ಲಿ ಇಟ್ಟ ಮೊಬೈಲ್ ಆಗಿರುತ್ತದೆ, ಆದರೆ ಅದರ ನಂಬರ್ ಗೊತ್ತಿರುವುದಿಲ್ಲ ಮತ್ತು ಮನೆಯ ಮೊಬೈಲ್ ಹೊರತುಪಡಿಸಿ ಉಳಿದ ಮೊಬೈಲುಗಳು ಮೃತೆಯ ಬಳಿ ಇದ್ದು ಅದನ್ನು ಹುಡುಕಾಡಿದರೂ ಸಿಗಲಿಲ್ಲ ಮತ್ತು ಅದರ ನಂಬರ್ ಸಹಾ ನಾನು 7022820412 ಎಂದು ತಪ್ಪಾಗಿ ಬರೆಯಿಸಿದ್ದು ಇರುತ್ತದೆ, ನಾನು ದೂರು ನೀಡುವಾಗ ಘಟನಾ ಸ್ದಳದಿಂದ ಮೃತೆಯನ್ನು ಆರ್ ಎನ್ ಎಸ್ ಆಸ್ಪತ್ರೆಗೆ ಕರೆದುಕೊಂಡು ಬರುವಾಗ ಮೃತೆಯು ಮಾತನಾಡಿದ್ದು ಇರುತ್ತದೆ ಹಾಗೂ ಮೃತೆಯನ್ನು ಆರ್ ಎನ್ ಎಸ್ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸೆ ನೀಡಿ ಹೆಚ್ಚಿನ ಉಪಚಾರಕ್ಕಾಗಿ ಭಟ್ಕಳದ ಆಸ್ಪತ್ರೆಗೆ ಸಾಗಿಸುವಾಗ ಅವಳು ಮಾತನಾಡಿರುವುದಿಲ್ಲ ಎಂದು ದಿಃ 24.07.2019 ರಂದು ನಾನು ತನಿಖಾಧಿಕಾರಿಗಳಾದ ಚಾಸಾ 23 ರವರ ಸಮಕ್ಷಮ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ನಾನು ದಿಃ 24.07.2019 ರಂದು ರಂದು ತನಿಖಾಧಿಕಾರಿಗಳಾದ ಚಾಸಾ 23 ರವರ ಸಮಕ್ಷಮ ಈಗ ನನಗೆ ಓದಿ ಹೇಳಿದಂತೆ ಅಂದರೆ " ನಾನು ದಿಃ 16.12.2016 ರಂದು ----------ಪಿರ್ಯಾದಿಯಲ್ಲಿ ಅಳವಡಿಸಲು ವಿನಂತಿ " ಎಂದು ಮರು ಹೇಳಿಕೆ

ನೀಡಿರುವುದಿಲ್ಲ. ಸಾಕ್ಷಿ ನಿರಾಕರಿಸಿದ ಸಾಕ್ಷಿಯ ಮರು ಹೇಳಿಕೆಯ ಸದ್ರಿ ನಿರ್ದಿಷ್ಟ ಭಾಗವನ್ನು ನಿಪಿ 2 ಎಂದು ಗುರುತಿಸಲಾಯಿತು.

8. ನನ್ನ ಅಳಿಯನಾದ ಆರೋಪಿ ಬೇರೆ ಮದುವೆ ಆಗಿರುವುದಿಲ್ಲ. ನಾವೆಲ್ಲರೂ ಈಗ ಒಳ್ಳೆಯ ರೀತಿಯಿಂದ ಇದ್ದೇವೆ. ನಿಪಿ. 1 ರಂತೆ ದೂರನ್ನು ನೀಡಿದ್ದರೂ ಸಹಾ ಆರೋಪಿಗೆ ತೊಂದರೆ ಆಗಬಾರದು ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ಜಿ ಎನ್ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

Sd/-

(ಪರಮೇಶ್ವರ ಪ್ರಸನ್ನ ಬಿ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ